# ‘ಮಗಳು ದೇಶ ಬೆಳಗುವಂತಾಗಲಿ’

ದೇವಸ್ಥಾನದಲ್ಲಿ ಆದಾಯ ಹೆಚ್ಚೆಚ್ಚು ಬರುತ್ತಿದ್ದರೂ ಅರ್ಚಕರ ಮನೆ ರಿಪೇರಿ ಮಾಡಿಸಿಕೊಡುವುದರಲ್ಲಿ ಕಮಿಟಿ ಮೆಂಬರುಗಳು ಜಿಪುಣತನ ಮಾಡಿದ್ದರು. ಕಗ್ಗಲು ನಾಮ ಸಂವತ್ಸರದ ಆ ಅರ್ಚಕರ ಗೂಡು ಮಳೆಗಾಲದಲ್ಲಿ ನೀರು ಸೋರುತ್ತಾ, ಎಲ್ಲಾ ಕಾಲದಲ್ಲೂ ಕತ್ತಲ ಕೊಂಪೆಯಾಗಿರುತ್ತಿತ್ತು. ಎಂದೊ ಕಟ್ಟಿದ್ದ ಆ ಮನೆಗಳಲ್ಲಿ ಕಿಟಕಿಗಳದ್ದೇ ಅಭಾವ. ಈ ಕಾಲದ ಮನೆಗಳಲ್ಲಿರುವವರಿಗೆ ಏನಿಲ್ಲದಿದ್ದರೂ ಮನೆಗಳಲ್ಲಿ ಕಿಟಕಿಗಳಿರುತ್ತಿವೆ. ಈ ಮನೆಗೆ ಕೆಲವರು ಪ್ರಸಾದನ ಮಿತ್ರರೂ ಬರುತ್ತಿದ್ದರು. ಅವರಲ್ಲೊಬ್ಬ ಪ್ರಸಾದನನ್ನು ಒಮ್ಮೆ ಕೇಳಿದ್ದ–

‘ಪ್ರಸಾದ ಇಂತಾ ಮನೇಲಿ ಹೇಗೆ ವಾಸ ಮಾಡ್ತೀರ. ಕೆಂಪಣ್ಣೋರಿಗೆ ಹೇಳಿ ಕಿಟಕಿ ಹಾಕಿಸ್ಕೊಂಡು ಸೂರು ರಿಪೇರಿ ಮಾಡಿಸ್ಕೋಬಾರ್ದಾ...?’

